ಆ)	ಸಿವಿಲ್	ಕ್ರಿಮಿನಲ್
1. ಉಚ್ಚ ನ್ಯಾಯಾಲಯ	1,12,637	2,527
2. ಜಿಲ್ಲಾ ನ್ಯಾಯಾಲಯಗಳು (ನಗರ ಸಿವಿಲ್ ನ್ಯಾಯಾಲಯಗಳನ್ನು ಒಳಗೊಂಡಂತೆ)	1,43,203	19,675
3. ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳಲ್ಲಿ (ಸಣ್ಣ ವ್ಯಾಜ್ಯಗಳ ನ್ಯಾಯಾಲಯ ಮತ್ತು ಸಿ.ಎಂ.ಎಂ. ನ್ಯಾಯಾಲಯಗಳು ಒಳಗೊಂಡಂತೆ)	1,08,371	95,702
4. ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಗಳು (ಸಂಚಾರಿ ನ್ಯಾಯಾಲಯಗಳನ್ನೊಳಗೊಂಡಂತೆ)	2,43,603	3,94,979
ಒಟ್ಟು	6,07,814	5.12,883

ರಾಜ್ಯದ ನೀರಾವರಿ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ನೆರವು.

439 (1206): ಶ್ರೀ ಪಿ.ಜಿ.ಆರ್. ಸಿಂಧ್ಯ (ತನಕಪುರ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ಸಾಲದ ಮೊತ್ತ ಬಾರದಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಸರ್ಕಾರ ವಿಶ್ವ ಬ್ಯಾಂಕಿನಿಂದ ಈ ಸಾಲದ ಬಿಡುಗಡೆಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಯಡಿಯಲ್ಲಿ ರಾಜ್ಯದ ಕೆಲವು ನೀರಾವರಿ ಯೋಜನೆಗಳಿಗೆ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೇ ಹಂತಕ್ಕೆ ವಿಶ್ವ ಬ್ಯಾಂಕ್ ನೆರವು ನೀಡುತ್ತಲಿದೆ. ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೇ ಹಂತಕ್ಕೆ ಯೋಜನೆಯಿಂದ ನಿರ್ವಸತಿ ಹೊಂದುವ ಒನರ ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಆದ ವಿಳಂಬದಿಂದಾಗಿ ವಿಶ್ವ ಬ್ಯಾಂಕ್ ನವೆಂಬರ್ 1992ರಿಂದ ತಾತ್ಕಾಲಿಕವಾಗಿ ನೆರವನ್ನು ಸ್ಥಗಿತಗೊಳಿಸಿದೆ.

ಆ) ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೇ ಹಂತದ ಪುನರ್ವಸತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಿಶ್ವ ಬ್ಯಾಂಕ್‌ನವರ ನಿಬಂಧನೆಗಳೆಲ್ಲವನ್ನು ಈಗ ಒಪ್ಪಿಕೊಂಡಿರುವರಿಂದ ಸಧ್ಯದಲ್ಲೇ ನೆರವು ಪುನರಾರಂಭವಾಗುವ ನಿರೀಕ್ಷಣೆಯಿದೆ

ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕಿನಿಂದ ಬಂದ ನೆರವಿನ ಮೊತ್ತ

440 (1295): ಶ್ರೀ ಜೆಟ್.ಎಂ. ರೇವಣ್ಣ (ಮಾಗಡಿ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯು.ಕೆ.ಪಿ.ಗೆ ವಿಶ್ವ ಬ್ಯಾಂಕ್ ನೆರವಿನಿಂದ ನೀಡಲಾದ ಹಣವೆಷ್ಟು; ಹಾಗೂ ನೆರವು ಮುಂದುವರೆಯುತ್ತಿದೆಯೇ;

ಆ) ಕಳೆದ ಎರಡು ವರ್ಷದಲ್ಲಿ ಸರ್ಕಾರವು ಬಿಡುಗಡೆ ಮಾಡಿದ ಹಣವೆಷ್ಟು;

ಇ) ಇದರಲ್ಲಿ ಖರ್ಚಾದ ಹಣವೆಷ್ಟು ಹಾಗೂ ಬಾಕಿ ಉಳಿದ ಹಣವೆಷ್ಟು;

ಈ) ಎಷ್ಟು ಹೆಕ್ಟೇರ್ ಜಮೀನಿಗೆ ನೀರು ಒದಗಿಸಲಾಗಿದೆ;

ಉ) ಈ ಯೋಜನೆ ಪೂರ್ತಿಗೊಳಿಸಿದರೆ ಒಟ್ಟು ಎಷ್ಟು ಸಾವಿರ ಹೆಕ್ಟೇರಿಗೆ ನೀರು ಒದಗಿಸಲು ಗುರಿ ಹಾಕಿಕೊಳ್ಳಲಾಗಿದೆ;

ಊ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣಾ (ಉಪ ಮುಖ್ಯಮಂತ್ರಿಗಳು):–

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಮೊದಲ ಘಟ್ಟದ 2ನೇ ಹಂತಕ್ಕೆ 245 ಮಿಲಿಯನ್ ಡಾಲರ್‌ಗಳ ನೆರವನ್ನು ವಿಶ್ವ ಬ್ಯಾಂಕ್ ನೀಡಲಿದೆ. ಯೋಜನೆಯಿಂದ ನಿರ್ವಸತಿ ಹೊಂದುವ ಜನರ ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಆದ ವಿಳಂಬದಿಂದಾಗಿ ನವೆಂಬರ್ 1992ರಿಂದ ನೆರವನ್ನು ವಿಶ್ವ ಬ್ಯಾಂಕ್ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ವಿಶ್ವ ಬ್ಯಾಂಕ್‌ನವರ ನಿಬಂಧನೆಗಳೆಲ್ಲವನ್ನೂ ಈಗ ಒಪ್ಪಿಕೊಂಡಿರುವುದರಿಂದ ನೆರವನ್ನು ಸಧ್ಯದಲ್ಲೇ ಪುನರಾರಂಭಿಸುವುದಕ್ಕೆ ಶಿಫಾರಸ್ಸು ಮಾಡುವುದಾಗಿ ವಿಶ್ವ ಬ್ಯಾಂಕ್ ಪರಿವೀಕ್ಷಣಾ ತಂಡವು ಆಶ್ವಾಸನೆ ನೀಡಿದೆ.

ಆ) ಮತ್ತು ಇ) ವಿವರಗಳು ಕೆಳಗಿನಂತಿವೆ:–

ವರ್ಷ	ಆಯವ್ಯಯದಲ್ಲಿ ನಿಗದಿ ಮಾಡಿದ ಮೊತ್ತ	ಬಿಡುಗಡೆ ಮಾಡಿ ಖರ್ಚಾದ ಮೊತ್ತ
1990–91	80 ಕೋಟಿ ರೂ.	69.08 ಕೋಟಿ ರೂ.
1991–92	107 ಕೋಟಿ ರೂ.	98.15 ಕೋಟಿ ರೂ.

ಈ) ಈ ಯೋಜನೆಯಿಂದ ಮಾರ್ಚ್ 92ರವರೆಗೆ 1,29,606 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಉ) ಈ ಯೋಜನೆಯ ಮೊದಲ ಘಟ್ಟದಿಂದ ಒಟ್ಟು 4,25,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಗುರಿ ಇದೆ.

ಊ) ಮೊದಲ ಘಟ್ಟದ ಯೋಜನೆಯನ್ನು 1996ರ ವೇಳೆಗೂ ಮತ್ತು 2ನೇ ಘಟ್ಟದ ಯೋಜನೆಯನ್ನು 2000 ಇಸವಿ ವೇಳೆಗೂ ಪೂರ್ಣಗೊಳಿಸುವ ಉದ್ದೇಶವಿದೆ.

ಹುಬ್ಬಳ್ಳಿ–ಧಾರವಾಡ ನಾಷ್ಟ್ರೀಯ ಹೆದ್ದಾರಿ ರಸ್ತೆ ಕೆಲಸ ಕ್ರಾರಂಭಿಸುವುದು.

441 (1273): ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ - ಧಾರವಾಡ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯು ಎಷ್ಟು ಕಿ.ಮೀ. ತಗ್ಗುಕೊಳ್ಳಲಾಗಿದೆ. ಸದರಿ ಕೆಲಸವು ಎಂದು ಪ್ರಾರಂಭವಾಗಿದೆ; ಮತ್ತು ಕೆಲಸಕ್ಕೆ ಎಷ್ಟು ಕಿ.ಮೀ. ರಸ್ತೆ ದುರಸ್ತಿಯಾಗಿದೆ, ಹಾಗೂ ಈಗ ಎಷ್ಟು ಜಾಗ ಮಿರ್ಡಿ ಮಾಡಲಾಗಿದೆ.